ದಿನಾಂಕ: 04-07-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು಼ ಶ್ರೀ.ಬಿ.ಕೆ.ಜೆ. 1 ರಿಂದ 3 ನೇ ಪ್ರತಿವಾದಿ ಪರ ವಕೀಲರಿಂದ಼**

ನನ್ನ ವಿದ್ಯಾಭ್ಯಾಸ ಸವದತ್ತಿಯಲ್ಲಿ ಆಗಿದೆ. ನಾನು ಪಿ.ಯು.ಸಿ ವರೆಗು ವಿದ್ಯಾಭ್ಯಾಸ ಮಾಡಿದ್ದೇನೆ. 1988 ರಲ್ಲಿ ನಾನು ಪಿ.ಯು.ಸಿ ಮುಗಿಸಿರುತ್ತೇನೆ. ನಾನು ಎಲ್ಲಿಯೂ ನೌಕರಿ ಮಾಡಿರುವುದಿಲ್ಲ. ನಮ್ಮ ತಂದೆಗೆ ಒಟ್ಟು ಮೂರು ಜನ ಮಕ್ಕಳು ಇರುತ್ತೇವೆ. ಅವರುಗಳು ನಾನು, ನಿರ್ಮಲಾ ಮತ್ತು ಪ್ರಸನ್ನದಿಕ್ಷಿತ. ನಿರ್ಮಲಾ ಇವರ ಮದುವೆ ಆಗಿದೆ. ಪ್ರಸನ್ನದಿಕ್ಷಿತ ಇವರ ಮದುವೆ ಆಗಿಲ್ಲ. ನನ್ನ ತಂದೆ ಮೃತಪಟ್ಟಿರುತ್ತಾರೆ ನನ್ನ ತಾಯಿ ಜೀವಿತಿದ್ದಾರೆ. ನನ್ನ ತಾಯಿಯ ಹೆಸರು ಶಾಂತಾಬಾಯಿ. ನನ್ನ ತಂದೆ 2007 ರಲ್ಲಿ ಮೃತಪಟ್ಟಿರುತ್ತಾರೆ.

2. ಸವದತ್ತಿ ಮತ್ತು ಗೋಕಾಕ ನಡುವೆ ಅಂದಾಜು 100 ಕಿ.ಮೀ ಅಂತರ ಇದೆ. ಸವದತ್ತಿಯಿಂದ ತಳಕಟ್ನಾಳಗೆ 120 ಕಿ.ಮೀ ಅಂತರ ಇದೆ. ನಾವು ಚಿಕ್ಕವರಿದ್ದಾಗಲೆ ನಮ್ಮ ತಂದೆ ಅವರ ಹೊಲ ಮತ್ತು ಮನೆಗಳನ್ನು ಮಾರಾಟ ಮಾಡಿರುತ್ತಾರೆ. ನನ್ನ ತಮ್ಮ ಪ್ರಸನ್ನದಿಕ್ಷಿತ ಒಂದು ಕೋ-ಆಪ್ರೇಟಿವ್ ಸೊಸೈಟಿಯಲ್ಲಿ ಮ್ಯಾನೇಜರ ಆಗಿ ಕೆಲಸ ಮಾಡುತ್ತಿದ್ದಾರೆ. ನನ್ನ ತಮ್ಮನಿಗೆ ರೂ.5000/- ಸಂಬಳ ಇರುತ್ತದೆ. ನನ್ನ ಅಕ್ಕಳಿಗೆ ಹಸಗುಟ್ಟಿ ಗ್ರಾಮದವರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ನನ್ನ ಅಕ್ಕ ಬಾದಾಮಿಯಲ್ಲಿ ವಾಸ ಇದ್ದಾರೆ.

3. ನನಗೆ ದಾವಾ ಆಸ್ತಿಗಳ ಸರ್ವೆ ನಂಬರ ಹೇಳಲು ಬರುತ್ತದೆ ಆದರೆ ಚಕ್ಕಬಂದಿ ಹೇಳಲು ಬರುವುದಿಲ್ಲ. ಮೂಲ ಪುರುಷ ಗಂಗಾಧರ ಇವರು ಎಷ್ಟು ವರ್ಷದ ಹಿಂದೆ ತೀರಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಗಂಗಾಧರ ಇವರಿಗೆ ಕಲಾವತಿ ಎಂದು ಒಬ್ಬಳು ಮಗಳು ಇದ್ದಾಳೆ ಎಂದರೆ ಸರಿ. ಸದರಿ ವಿಷಯ ನನಗೆ

ಗೊತ್ತಿತ್ತು ಎಂದರೆ ಸರಿ. ಸಂಭಾಜಿ ರಾಘವೇಂದ್ರ ಮತ್ತು ಕೃಷ್ಣಾಜಿ ಇವರ ನಡುವೆ ಪಾಲು ಆಗಿತ್ತು ನಮಗೆ ತಿಳಿಸದೆ ಪಾಲು ಮಾಡಿಕೊಂಡಿರುತ್ತಾರೆ. ನಾನು ಸದರಿಯವರ ಕುಟುಂಬಕ್ಕೆ ಸಂಬಂಧ ಇಲ್ಲದೇ ಇದ್ದುದ್ದರಿಂದ ಅವರು ಪಾಲು ಮಾಡಿಕೊಳ್ಳುವ ವಿಷಯ ನನಗೆ ತಿಳಿಸುವ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ.

4. ಪ್ರತಿವಾದಿ 2 ರಿಂದ 4 ರವರ ವಿಳಾಸ ನನಗೆ ಮದುವೆ ಆದಾಗಿನಿಂದ ಗೊತ್ತಿದೆ. ನನಗೆ ಪ್ರತಿವಾದಿಯರ ವಿಳಾಸವನ್ನು 9 ನೇ ಪ್ರತಿವಾದಿ ಕೊಟ್ಟಿದ್ದಾರೆ ಎಂದರೆ ಸರಿ. ಈ ದಾವೆಯಲ್ಲಿ 9 ನೇ ಪ್ರತಿವಾದಿ ಹಾಜರಾಗಿರುತ್ತಾರೆ. ನನ್ನ ಮತ್ತು 9 ನೇ ಪ್ರತಿವಾದಿಯ ನಡುವೆ ಸಂಬಂಧ ಸರಿಯಾಗಿದೆ ಎಂದರೆ ಸರಿ. 9 ನೇ ಪ್ರತಿವಾದಿ ಈ ದಾವೆಯಲ್ಲಿ ಹಾಜರಾದ ದಿನವೇ ತಮ್ಮ ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿ. 9 ನೇ ಪ್ರತಿವಾದಿಗೆ ತಕರಾರು ಸಲ್ಲಿಸಲು ನಾನೇ ಹೇಳಿದ್ದೆ ಎಂದರೆ ಸರಿ. ನಮ್ಮ ವಕೀಲರಾದ ಬಳ್ಳಾರಿ ವಕೀಲರ ಮುಖಾಂತರ ಹಳ್ಳಿ ವಕೀಲರಿಗೆ ತಿಳಿಸಿ ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿ.

5. 1 ನೇ ಪ್ರತಿವಾದಿಯ ಗಂಡ ಸಂಭಾಜಿ ಗೋಟೆ 2013 ರಲ್ಲಿ ಮೃತಪಟ್ಟಿರುತ್ತಾರೆ. ಪ್ರತಿವಾದಿ 1 ರಿಂದ 3 ರವರು ಸಲ್ಲಿಸಿದ ಲಿಖಿತ ಹೇಳಿಕೆಯನ್ನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ಪ್ರತಿವಾದಿಯರು ತಮ್ಮ ಲಿಖಿತ ಹೇಳಿಕೆಯಲ್ಲಿ ನನ್ನ ಮದುವೆ ನಾಗೇಶ ಇವರ ಜೊತೆ ಆಗಿಯೇ ಇಲ್ಲ ಎಂದು ಹೇಳಿರುತ್ತಾರೆ. ನಮ್ಮ ಪದ್ಧತಿಯ ಪ್ರಕಾರ ಈ ರೀತಿಯಾಗಿ ಮದುವೆ ಆಗಿದೆ ಎಂದು ತಿದ್ದುಪಡಿ ಮಾಡಿಕೊಂಡಿಲ್ಲ ಹಾಗೂ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿಯೂ ಸಹ ಹೇಳಿಲ್ಲ. ಅದೇ ರೀತಿ ತಮ್ಮ ಲಿಖಿತ ಹೇಳಿಕೆಯಲ್ಲಿ 1 ರಿಂದ 3 ನೇ ಪ್ರತಿವಾದಿಯರು ನಾಗೇಶ ಮಾನಸಿಕವಾಗಿ ಅಸ್ವಸ್ಥರಿದ್ದರು ಎಂದು ಹೇಳಿದ್ದಾರೆ ಎಂದರೆ ಸರಿ.

6. ನಾಗೇಶ ಇವರು ಮಾನಸಿಕವಾಗಿ ಅಸ್ವಸ್ಥರಿದ್ದರು ಎಂದರೆ ಸರಿ. ಸದರಿ ನಾಗೇಶ ಇವರು ಧಾರವಾಡದ ಆಸ್ಪತ್ರೆಯಲ್ಲಿ, ಬೆಂಗಳೂರಿನ ನಿಮಹಾಂಸ ಆಸ್ಪತ್ರೆಯಲ್ಲಿ ಹಾಗೂ ಡಾ. ದೇಸಾಯಿ ಇವರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು ಎಂದರೆ ಸರಿ. ನಾಗೇಶ ಇವರು ಮೃತಪಡುವವರೆಗೂ ಮಾನಸಿಕವಾಗಿ ಅಸ್ವಸ್ಥರಾಗಿದ್ದರು ಎಂದರೆ ಸರಿ. ಪ್ರತಿವಾದಿ 2 ಮತ್ತು 3 ರವರ ಮದುವೆ ಆಗಿ ಅವರು ತಮ್ಮ ತಮ್ಮ ಗಂಡನ ಮನೆಯಲ್ಲಿ ವಾಸ ಇದ್ದಾರೆ ಎಂದರೆ ಸರಿ. ನಾಗೇಶ ಇವರಿಗೆ ಆಸ್ಪತ್ರೆಗೆ ತೋರಿಸುವುದು ಔಷಧಿ ಕೊಡುವುದು ಅವರ ತಾಯಿ ಶೈಲಜಾ ಅಂದರೆ 1 ನೇ ಪ್ರತಿವಾದಿ ಮಾಡುತ್ತಿದ್ದರು ಎಂದರೆ ಸರಿ.

7. ನಾಗೇಶ ಮೂಡಲಗಿ ತಾಲೂಕಿನ ತಳಕಟ್ನಾಳದಲ್ಲಿ ವಾಸ ಇದ್ದರು ಎಂದರೆ ಸರಿ. ನಾನು ನಾಗೇಶ ಇವರ ಜೊತೆ ತಳಕಟ್ನಾಳನಲ್ಲಿ ಅವರ ಹೆಂಡತಿಯಾಗಿ ವಾಸ ಇದ್ದ ಬಗ್ಗೆ ಆಧಾರ ಕಾರ್ಡನ್ನು ಹಾಜರಪಡಿಸಿದ್ದೇನೆ. ಪಡಿತರ ಚೀಟಿಯನ್ನು ಹಾಜರ ಮಾಡಿಲ್ಲ. ಮತದಾರರ ಯಾದಿ ಹಾಜರ ಮಾಡಿದ್ದೇನೆ. ಮತದಾರರ ಯಾದಿ ಯಾವ ಸಾಲಿನದು ಕೊಟ್ಟಿದ್ದೇನೆ ಎಂದು ಗೊತ್ತಿಲ್ಲ. ನಾನು ಹಾಜರಪಡಿಸಿದ ನನ್ನ ಆಧಾರ ಕಾರ್ಡನಲ್ಲಿ ನಾನು ಗುರ್ಲಹೊಸೂರನಲ್ಲಿ ವಾಸ ಇದ್ದೇನೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ನಾನು ತಳಕಟ್ನಾಳ ಗ್ರಾಮದಲ್ಲಿ ವಾಸ ಇಲ್ಲದೇ ಇರುವುದರಿಂದ ತಳಕಟ್ನಾಳ ವಿಳಾಸದ ಪಡಿತರ ಚೀಟಿ ಮತ್ತು ಮತದಾರರ ಯಾದಿ ಹಾಜರಪಡಿಸಿಲ್ಲ ಎಂದರೆ ಸರಿ. ಆದರೆ ನಾನು ತಳಕಟ್ನಾಳಗೆ ಹೋಗಿ-ಬಂದು ಮಾಡುತ್ತಿದ್ದೆ. ತಳಕಟ್ನಾಳನಲ್ಲಿ ಸಂಭಾಜಿ ಇವರ ಒಟ್ಟು 3 ಮನೆ ಇವೆ.

8. ನನ್ನ ಮತ್ತು ಪ್ರತಿವಾದಿ 4 ರಿಂದ 10 ರವರ ನಡುವಿನ ಸಂಬಂಧ ಸರಿ ಇದೆ ಎಂದರೆ ಸರಿ. 9 ನೇ ಪ್ರತಿವಾದಿ ತಳಕಟ್ನಾಳನಲ್ಲಿ ಇರುತ್ತಾರೆ. 9 ನೇ ಪ್ರತಿವಾದಿ ನನಗೆ ಎಲ್ಲ ಮಾಹಿತಿ ಕೊಡುತ್ತಾರೆ ಎಂದರೆ ಸರಿ. 9 ನೇ ಪ್ರತಿವಾದಿಯೂ ನನ್ನ

ಕಡೆಯಿಂದ ಈ ದಾವೆ ಹಾಕಿಸಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಸುಮಾರು 70 ವರ್ಷ ವಯಸ್ಸಾಗಿದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯೂ ಸಹ ತಳಕಟ್ನಾಳನಲ್ಲಿ ವಾಸ ಇರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ಗಂಡ ಮೃತಪಟ್ಟ ನಂತರ 1 ನೇ ಪ್ರತಿವಾದಿ ಹಾಗೂ ಅವರ ಮಾನಸಿಕ ಅಸ್ವಸ್ಥ ಮಗ ನಾಗೇಶ ತಳಕಟ್ನಾಳನಲ್ಲಿಯೇ ಇರುತ್ತಾರೆ ಎಂದರೆ ಸರಿ. ನಾನು ತಳಕಟ್ನಾಳಗೆ ಹೋಗಿ-ಬಂದು ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆಗಳನ್ನು ಹಾಜರ ಮಾಡಿಲ್ಲ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)
ಓ ಹೇ ಕೇ ಸರಿ ಇದೆ

(ಉಮೇಶ ಎಸ್ ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ